ಓ.ಎಸ್.ನಂ.73/2018
ಡಿ.ಡಬ್ಲ್ಯೂ-01

**ಸಾಕ್ಷಿಯನ್ನು ದಿಃ 09.08.2024 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ.Y.H.R.ವಕೀಲರಿಂದ.**

ನಾನು ಬಿ.ಎ. ವಿದ್ಯಾಭ್ಯಾಸ ಮಾಡಿರುತ್ತೇನೆ. ಸಾಕ್ಷಿ ಪ್ರಮಾಣ ಪತ್ರ ತಯಾರು ಮಾಡಲು ನಾನೇ ವಕೀಲರಿಗೆ ಮಾಹಿತಿಯನ್ನು ನೀಡಿರುತ್ತೇನೆ. ವಾದಿ ಯಾವ ಪರಿಹಾರ ಕೋರಿ ದಾವೆ ಸಲ್ಲಿಸಿದ್ದಾರೆಂದು ನನಗೆ ಗೊತ್ತಿರುತ್ತದೆ. ವಾದಿ ದಾವೆಯನ್ನು 3 ಲಕ್ಷ ಹಣ ನೀಡಿ ಕರಾರು ಪತ್ರ ಮಾಡಿಕೊಂಡಿರುವುದಾಗಿ ಸಲ್ಲಿಸಿರುತ್ತಾರೆ. ದಾವಾ ಸ್ವತ್ತಿನ ಸರ್ವೆ ನಂ 128 ಆಗಿರುತ್ತದೆ. ಅದರ ವಿಸ್ತೀರ್ಣ 2 ಎಕರೆ 18 ಗುಂಟೆ ಇರುತ್ತದೆ. ಸದರಿ ಜಮೀನು ಪಿ.ಹೆಚ್ ಹಳ್ಳಿಯಲ್ಲಿರುತ್ತದೆ. ದಾವಾ ಸ್ವತ್ತಿನ ಮೂಲ ಮಾಲಿಕರು ನನ್ನ ತಾಯಿ ಹೇಮಾವತಮ್ಮಾ ಆಗಿರುತ್ತಾರೆ.

ನನ್ನ ತಾಯಿಗೆ 2011 ರಲ್ಲಿ ದಾವಾ ಸ್ವತ್ತನ್ನು ಕ್ರಯ ಪತ್ರದ ಮೂಲಕ ಖರೀದಿ ಮಾಡಿರುತ್ತಾರೆ. ಸದರಿ ಕ್ರಯ ಪತ್ರದ ಆಧಾರದ ಮೇರಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ನನ್ನ ತಾಯಿಯೇ ಅನುಭೋಗದಲ್ಲಿದ್ದಾರೆ ಎಂದರೆ ಸರಿ. ಅವರು ಈಗಲೂ ವ್ಯವಸಾಯದ ಕೆಲಸ ಮಾಡುತ್ತಾರೆ. ನನ್ನ ತಾಯಿ ಆರೋಗ್ಯವಾಗಿ ಚನ್ನಾಗಿದ್ದಾರೆ.

ನನಗೆ ವಾದಿಯನ್ನು ಆತ್ಮಾನಂದ ಅವರು ಕರೆದುಕೊಂಡು ಪರಿಚಯ ಮಾಡಿಸಿದ್ದು ಎಷ್ಟು ವರ್ಷಗಳ ಹಿಂದೆ ಎಂದು ನನಗೆ ನೆನಪಿರುವುದಿಲ್ಲ. ಕ್ರಯದ ಕರಾರು ಪತ್ರ ಆಗುವ ಮೊದಲೇ ನನಗೆ ಪರಿಚಯವಾಗಿದ್ದರು. ವಾದಿ ನಮ್ಮ ಊರಿಗೆ ಬಂದಿದ್ದು ಪರಿಚಯವಾಗಿರುತ್ತಾರೆ. ಕ್ರಯದ ಕರಾರು ಆಗುವ 6 ತಿಂಗಳ ಮೊದಲು ದಾವಾ ಸ್ವತ್ತನ್ನು ವಾದಿಗೆ ತೋರಿಸಿರುತ್ತೇನೆ. ಕ್ರಯದ ಕರಾರಿನ ಮಾತುಕತೆ ನಮ್ಮ ಮನೆಯಲ್ಲಿ ಆಗಿರುತ್ತದೆ. ಮಾತುಕತೆ ಆದಾಗಾ ಮುಂಗಡ ಹಣ ನೀಡಿರುವುದಿಲ್ಲ. ನನ್ನ ತಾಯಿ ಆರೋಗ್ಯವಾಗಿದ್ದು ನ್ಯಾಯಾಲಯಕ್ಕೆ ಬರಲು ತೊಂದರೆ ಇಲ್ಲ. ನನ್ನ ತಾಯಿ ನ್ಯಾಯಾಲಯಕ್ಕೆ ಬಂದಲ್ಲಿ ಸತ್ಯ ಗೊತ್ತಾಗುತ್ತದೆ ಎಂದು ನಾನು ಅವರ ಪರಿವಾಗಿ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಎಲ್ಲಾ ದಾಖಲೆಗಳನ್ನು ಆತ್ಮಾನಂದ ಅವರೇ ತೆಗೆಸಿ ನೀಡಿರುತ್ತಾರೆ. ದಾವಾ ಸ್ವತ್ತಿನ ದಾಖಲೆಗಳನ್ನು ನಾನು ಮತ್ತು ನನ್ನ ತಾಯಿ ನೀಡಿದ್ದು ಆತ್ಮಾನಂದ ನೀಡಿರುವುದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 11.01.2016 ರಂದು ಕರಾರು ಪತ್ರ ಹು.ದುರ್ಗ ನೊಂದಣಿ ಕಚೇರಿಯಲ್ಲಿ ನೊಂದಾಗಿರುತ್ತದೆ.

ಆಗ ದಿನ ನಾನು ನನ್ನ ತಂದೆ ನನ್ನ ತಾಯಿ ಮತ್ತು ನನ್ನ ಸಹೋದರರು ಹೋಗಿರುತ್ತೇವೆ. ಕ್ರಯದ ಕರಾರು ಪತ್ರವನ್ನು ಆತ್ಮಾನಂದ ಅವರು ಮೊದಲೇ ತಯಾರು ಮಾಡಿ ಇಟ್ಟಿದ್ದರು. ಆತ್ಮಾನಂದ ಅವರೇ ಎಲ್ಲಾ ದಾಖಲೆಗಳನ್ನು ದಸ್ತು ಬರಹಗಾರರಿಗೆ ನೀಡಿರುತ್ತಾರೆ. ದಸ್ತು ಬರಹಗಾರರಿಗೆ ಕರಾರು ಪತ್ರ ತಯಾರು ಮಾಡಲು ಮಾಹಿತಿಯನ್ನು ನಾನು ಮತ್ತು ಇತರ ಪ್ರತಿವಾದಿಗಳು ನೀಡಿದ್ದು ಆತ್ಮಾನಂದ ನೀಡಿದ್ದಾರೆಂದು ನಾನು ಸುಳ್ಳು ಹೇಳುತ್ತಿದ್ದೇ ನೆಎಂದರೆ ಸರಿಯಲ್ಲ.

ಕ್ರಯದ ಕರಾರು ಆದ ದಿನ 3 ಲಕ್ಷ ಹಣವನ್ನು ನಾನು ನನ್ನ ತಾಯಿ ಸಾಕ್ಷಿದಾರರ ಸಮಕ್ಷಮ ಪಡೆದಿರುತ್ತೇವೆ. ಕರಾರು ಪತ್ರದಲ್ಲಿ 4 ತಿಂಗಳ ಒಳಗಾಗಿ ಕ್ರಯ ಪತ್ರ ನೊಂದಣಿ ಮಾಡಿಕೊಡಬೇಕೆಂದು ನಮೂದು ಇದೆ ಎಂದರೆ ಸಾಕ್ಷಿ ಕ್ರಯ ಪತ್ರ ಅದೇ ದಿನ ತಯಾರು ಇದ್ದು ಈ ಸಿ ಯಲ್ಲಿ 10 ಲಕ್ಷ ಬ್ಯಾಂಕ್ ಸಾಲ ಇದ್ದಿದ್ದರಿಂದ ಸಮಯ ಪಡೆದಿದ್ದೇವೆ ಎಂದು ಹೇಳುತ್ತಾರೆ. ಬ್ಯಾಂಕ್ ಸಾಲ ಪಡೆದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಕ್ರಯ ಪತ್ರ ನೂಂದಣಿ ಮಾಡಿ ಕೊಡದೆ ಇರುವ ಕಾರಣ ವಾದಿ ದಿನಾಂಕ 13.05.2016 ರಂದು ನೋಟಿಸ್ ನೀಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಅದಕ್ಕೆ ಮರುತ್ತರ ನೀಡಿದ್ದೇವೆ ಎಂದು ಹೇಳುತ್ತಾರೆ. ಮರುತ್ತರವನ್ನು ಯಾವ ಪ್ರತಿವಾದಿ ನೀಡಿದ್ದಾರೆಂದು ನನಗೆ ನೆನಪಿಲ್ಲ.

ನಾನು ನನ್ನ ತಾಯಿ ಮತ್ತು ಇತರ ಪ್ರತಿವಾದಿಗಳು ಮರುತ್ತರ ನೀಡಿಲ್ಲವೆಂದರೆ ಸರಿಯಲ್ಲ. ಎಲ್ಲರೂ ಸೇರಿ ಮರುತ್ತರವನ್ನು ನೀಡಿದ್ದೇವೆ ಎಂದು ಹೇಳುತ್ತಾರೆ. ಸದರಿ ಮರುತ್ತರದ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. 4 ತಿಂಗಳು ಅವಧಿ ಮುಗಿದ ಬಳಿಕ ಹಣ ವಾಪಸ್ಸು ನೀಡುತ್ತೆವೆಂದು ಹೇಳಿ ವಾದಿಯ ಊರಿಗೆ ಹೋಗಿರುತ್ತೇವೆ. ಆ ದಿನ ನಾನು ಮತ್ತು ಪ್ರತಿವಾದಿ 5 ನನ್ನ ತಮ್ಮ ಸತ್ಯಾನಂದ ಹೋಗಿರುತ್ತೇವೆ. ನಾನು ಮತ್ತು ನನ್ನ ತಮ್ಮ ವಾದಿಯ ಊರಿಗೆ ಹೋಗಿರುವುದಾಗಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಮ್ಮ ತಾಯಿ ಮತ್ತು ತಂದೆ ಹೋಗಿದ್ದು ನೀವು ಹೋಗಿಲ್ಲವೆಂದರೆ ಸಾಕ್ಷಿ ಹೋಗಿರಬಹುದು ಎಂದು ಹೇಳುತ್ತಾರೆ.

ವಾದಿ ನೋಟಿಸ್ ನೀಡಿದ ಬಳಿಕ ನನ್ನ ತಂದೆ ತಾಯಿ ವಾದಿಯ ಬಳಿ ಹೋಗಿ ಕ್ರಯ ಪತ್ರ ಮಾಡಿಕೊಡಲು ಸಮಯ ಕೇಳಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 5 ಅವರು ನೀಡಿರುವ ಮರುತ್ತರ ನಮಗೆ ಗೊತ್ತಿಲ್ಲದೆ ನೀಡಿರುತ್ತಾರೆಂದು ನಮ್ಮ ತಂದೆ ತಾಯಿ ವಾದಿಗೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ನನ್ನ ತಾಯಿಯ ಸ್ವಯಾರ್ಜಿತ ಸ್ವತ್ತು ಆಗಿದ್ದರಿಂದ ವಾದಿ ಕ್ರಯ ಪತ್ರ ಮಾಡಿಕೊಡಲು ಸಮಯಾವಕಾಶ ನೀಡಿರುತ್ತಾರೆ ಎಂದರೆ ಸರಿಯಲ್ಲ.

4 ತಿಂಗಳ ಅವಧಿ ಮುಗಿದ ನಂತರ ವಾದಿಗೆ ಕ್ರಯದ ಕರಾರು ಪತ್ರವನ್ನು ರದ್ದು ಮಾಡುವಂತೆ ನಾವು ನೋಟಿಸ್ ನೀಡಿರುವುದಿಲ್ಲ. ಅವರು ನೀಡಿದ ನೋಟಿಸ್ ಗೆ ಉತ್ತರ ನೀಡಿದ್ದೇವೆ ಎಂದು ಹೇಳುತ್ತಾರೆ. ಕ್ರಯದ ಕರಾರಿನ ಮೊದಲೇ ನಾವು ಕೈಸಾಲ ಮಾಡಿಕೊಂಡಿದ್ದೇವೆ ಎಂದರೆ ಸರಿ. ಸಾಲ ತಿರುವಳಿಯ ಉದ್ದೇಶದಿಂದ ದಾವಾ ಸ್ವತ್ತನ್ನು ವಾದಿಗೆ ಮಾರಾಟ ಮಾಡಲು ಒಪ್ಪಿ ಕರಾರು ಪತ್ರ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಪ್ರಮಾಣ ಪತ್ರದ ಪುಟ 3 ರ ಪ್ಯಾರಾ 2 ರಲ್ಲಿ ಬ್ಯಾಂಕ್ ನಲ್ಲಿ ಸಾಲ ಪಡೆದ ಬಗ್ಗೆ ಹೇಳಿದ್ದು ಮತ್ತು ಸಾಲದ ಭದ್ರತೆಗಾಗಿ ದಾಖಲೆ ಬರೆದುಕೊಂಡು ವಾದಿ ಸುಳ್ಳು ದಾವೆ ಸಲ್ಲಿಸಿರುವ ಬಗ್ಗೆ ತಕರಾರಿನಲ್ಲಿ ಹೇಳಿಲ್ಲವೆಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ

ಕುಣಿಗಲ್.